ಪದೇ ಪದೇ ಓಡಾಡುತ್ತ ಗಮನ ಸೆಳೆದಳು. ನೋಡಲು ಚಟುವಟಿಕೆಯಿಂದ ಆರೋಗ್ಯವಾಗಿದ್ದಳು. ಇವನ ಮನದಲ್ಲಿಳಿದದ್ದು ಅವಳ ವಯಸ್ಸಿಗೆ ಮೀರಿ ಎದ್ದುಕಾಣುವ ಎದೆ. ವಾಪಸು ಬರುವಾಗ ಜೊತೆಯಲ್ಲಿ ಬಂದ ಭಾವಿಮಾವ, ಕೇರಿಯ ಬುದುವಂತನನ್ನ ಕರೆಸಿ ಹಿರಿಯರು, ಮನೆಯವರೆದುರು ಪ್ರಸ್ತಾಪವಿಟ್ಟು ಮದುವೆ ನಿಕ್ಕಿಮಾಡಿಕೊಂಡೇ ಹೋಗಿದ್ದ.

ಯಮ್ಮೆಗುಡ್ಡದ ನೆತ್ತಿಯಮೇಲೆ ಮೋಡದದೆಯಲ್ಲಿನ ನರಜಾಲವನ್ನು ಬೆಳಗುತ್ತ ಕೋಲ್ಮಿಂಚು ಕೆಳಗಿಳಿಯಿತು. 'ಓ!... ಚಿಗರಿ ಕೋಡು. ಸ್ಮಶಾನದಾಗ್ ಇಳತ್ತು; ಹಿರಿಯಾರ ಆತಮ ಯಾವ್ದೋ ಮ್ಯಾಲಿನಲೋಕಕ್ ಸೇರಿಕ್ಯಂತು...' ಉದ್ಗರಿಸಿದವ 'ನಂಗೊಂದು ಹುಚ್ಚು! ಏಟೊಂದು ಚಿಗರಿಕೋಡು ಇಳಿತಾನೆ ಇರತಾವು! ಮತ್... ನಮ್ ಗಂಗೀ ಮೈಯಾಗ ಸೇರಿದ ಆತಮ ಯಾವದು?' ಅಂತ ತಲೆ ಕೊಡವಿದ. ತಕ್ಷಣ ನೆನಪಾಯಿತು. ಇವತ್ತು ಗಂಗಿಗೆ 'ನೋಟ' ನೋಡುತ್ತೇನೆ ಅಂತ ಹೇಳಿಯಾಗಿತ್ತು. ತಾನಿನ್ನೂ ಇಲ್ಲೇ ಇದ್ದಾನೆ. ಅವರೆಲ್ಲಾ ಚೌಡವ್ವನ ಮರದ ಹತ್ರ ಕಾಯುತ್ತಿರಬಹುದು. ಆಗಲೇ ಹೊತ್ತು ಕಂತುತ್ತಿದೆ; ತನಗಿನ್ನೂ ಸ್ನಾನವಾಗಿಲ್ಲ ಅನ್ನುವುದು ಹೊಳೆದು ಗಡಿಬಿಡಿಗೆ ಬಿದ್ದ. ಅದೇ ಬೇರು ಹಿಡಿದು ಮೇಲೆ ಹತ್ತಿ ಕಾನಮೂಲಕ ದಾರಿಗೆ ಬಂದ. ಮರದ ಕೊಂಬೆಗೆ ಕಂಬಳಿ ನೇತುಹಾಕಿ ಅಂಗಿ ಪಂಚೆಯನ್ನು ಬಿಚ್ಚಿಟ್ಟ. ಕೌಪೀನದಲ್ಲಿ ಕೇದ್ಗೆಹಿಂಡಿನ ಹತ್ತಿರ ನೀರಿಗಿಳಿದು ಕರಡುನೀರಲ್ಲೆ ಮುಳುಗುಹಾಕಿ ಸ್ನಾನ ಮುಗಿಸಿದ. ಪಂಜಿ ಸುತ್ತಿಕೊಂಡು ಬರಿಮೈಯಲ್ಲಿ ಊರಕಡೆ ಹೆಜ್ಜೆ ಹಾಕಿದ.

ಮದುವೆಯಾಗಿ ಮನೆತುಂಬಿದ ಸುಗಣಿಯ ಸಂಗದಲ್ಲಿ ಅದೆಂತಹ ಸುಖವಿತ್ತು? ಈ ಸುಖವೆಂಬುದು ವಿವರಣೆಗಾಗಲಿ, ವಿಚಾರಕ್ಕಾಗಲಿ ದಕ್ಕದ ವಸ್ತುವೆನಿಸಿತ್ತು. ಅದೆಲ್ಲಿ ಹುಟ್ಟುತ್ತದೆ... ಚರ್ಮ, ನರ, ಮಾಂಸ, ಮನಸು ಯಾವುದರಲ್ಲಿ ಹರಿಯುತ್ತದೆ, ಬಗೆಹರಿಯದ ಬಾಬತ್ತಾಗಿತ್ತು. ಬಿಸಿಯಾ.. ಮೆತ್ತಗಾ... ರುಚಿಯಾ... ಊಹೂಂ; ವಿಚಾರಾನೇ ಮಾಡಬಾರದು ಅನ್ನುವ ನಿಲುವಿಗೆ ಬಂದುಬಿಡುತ್ತಿದ್ದ. ಆ ವರ್ಷ ಮಳೆ ವಿಪರೀತ ಕಮ್ಮಿ. ಬಿತ್ತಿದ ನೆಲ ಬಿಗಿದುಕೊಂಡು ಗೇಣುದ್ದದ ಭತ್ತ ಹಾಲುಗಟ್ಟಲಾಗದೆ ನೀರಿಗಾಗಿ ಬಾಯಿಬಿಡುತ್ತಿತ್ತು. ಗದ್ದೆಗಿಂತ ಒಂದಾಳು ಕೆಳಗೆ ನೂರುಮಾರು ದೂರ ಸರಿದ ಕೆರೆಯಿಂದ ನೀರು ಹಾಯಿಸೋದಾದರೂ ಹೇಗೆ? ಅದರಲ್ಲಾದರೂ ಎಷ್ಟು ನೀರಿತ್ತು? ಸುಮಾರು ಜನರಿಗೆ ಸರಕಾರದಿಂದ ಬರಪರಿಹಾರ ಬಂತು. ತಾನೂ ಹೋಗಿದ್ದ. 'ಕೆರೆ... ಕಾಡು ನೋಡದೆ ಒತ್ತುವರಿ ಮಾಡಿಕ್ಯಂಡ್ರೆ ನಿಂದಾಗ್ತದೇನು? ರಿಕಾರ್ಡಿನಲ್ಲಿ ಇಲ್ಲ' ಅಂದರು ಶಾನುಭೋಗರು. ಈ ಆತಂಕ ಅವನಿಗೂ ಇತ್ತು. ಎಲೆಕ್ಷನ್ ಬಂದಾಗೆಲ್ಲ ಶಿರಸಿ ಪೇಟೆಯಿಂದ ಕೇರಿಗೊಬ್ಬ ಬಂದು ಭಾಷಣ ಮಾಡುತ್ತಿರುತ್ತಿದ್ದ. ಆ ಕಲಿತ ಮನುಷ್ಯನೆಂದು ಕೇರಿಯವರು ಹೇಳುತ್ತಿದ್ದ ಸುಕುಮಾರ, ಆಗಾಗ ಬರುತ್ತ ಬೋಧನೆ ಮಾಡುತ್ತಾ ವಂತಿಗೆ ವಸೂಲುಮಾಡಿಕೊಂಡು ಹೋಗುತ್ತಿದ್ದ. ಅವನ ಮನೆ ವಿಶೇಷಕ್ಕೆ ಅಂತ ಕೋಳಿ ಹುಡುಕುತ್ತಿದ್ದಾಗ ದೊಡ್ಡೀರ್ಯ ಸುಗಣಿಯ ಹುಂಡುಮೈ ಹೇಟೆಯನ್ನು ಕೊಟ್ಟಿದ್ದ. ಎಷ್ಟು ಕೊಡಲಿ ಅನ್ನುವಂತೆ ಕಿಸೆಯಲ್ಲಿ ಹುಡುಕುತ್ತಿದ್ದಾಗ 'ಐ!... ಬುಡ್ರಿ ಅತ್ಲಾಗೆ, ಅದ್ಯಾಕ್ ಕೇಳದು?' ಅಂತ ಮೆಚ್ಚಿಸಿದ್ದ. ಈಗ ಆತನನ್ನು ಕಂಡು ಗೋಳು ಹೇಳಿಕೊಂಡು ಅವನು ಕೇಳಿದ ವಂತಿಗೆಯನ್ನೂ ಕಷ್ಟದಿಂದ ಸೇರಿಸಿ ಕೊಟ್ಟು ಅವನು ಕರೆದುಕೊಂಡು ಹೋದಲ್ಲೆಲ್ಲ ಹೋಗಿದ್ದಾಗಿತ್ತು. ಪೇಟೆಯನ್ನ ಈ ಪರಿ ಸುತ್ತಿದ್ದು, ಪೇಟೆಯವರನ್ನ ಇಷ್ಟೆಲ್ಲ ನೋಡಿದ್ದು ಮೊದಲ ಬಾರಿಯಾಗಿತ್ತು. 'ರಿಕಾರ್ಡು ಮತ್ತೊಂದು ಅಂತ ತಲೆ ಕೆಡಿಸ್ಕೊಳೋದು ಈಗ ಬ್ಯಾಡ. ಅದೆಲ್ಲ ಮುಂದೆ ನೋಡ್ವ. ಸದ್ಯಕ್ಕೆ ನಿಂಗೂ ಇಂತಾ ಕಷ್ಟದಲ್ಲಿ ಪರಿಹಾರ ಸಿಗತದೆ... ಅಷ್ಟು ಮಾಡಿದೇನೆ...' ಅಂತ ದೊಡ್ಡವರು ಹೇಳಿ ಕಳಿಸಿದ್ದರು ಒಂದು ಆಫೀಸಿನಲ್ಲಿ. ರೇಶನ್ ಕಾರ್ಡ್ ಮಾಡಿಸುವಾಗಲೂ ಇಂಥದ್ದೇ ಗೊಂದಲವಾಗಿತ್ತು. ತನ್ನ ಜನರಲ್ಲಿ ಅಜ್ಜನ ಹೆಸರನ್ನೇ ಮೊಮ್ಮಗನಿಗೆ ಇಡುತ್ತ ಬರುವ ಪರಿಪಾಠವಾಗಿದ್ದಕ್ಕೆ ಎಷ್ಟೋ ಜನರ ಹೆಸರು ಒಂದೇ ಆಗಿರುತ್ತಿತ್ತು. ಅವರ ಅಪ್ಪನ ಹೆಸರೂ ಅದೇ